ದಿನಾಂಕ: 02-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು 1 ರಿಂದ 3, 6(ಎ),(ಬಿ) ಮತ್ತು 7 ನೇ ಪ್ರತಿವಾದಿ ಪರ ಶ್ರೀ ಸಿ.ಆರ್. ವಕೀಲರಿಂದ</u>**

ನನ್ನ ಹೆಸರು ಸ್ವಾಮಿ. ನನ್ನ ತಂದೆ ಹೆಸರು ಸಿದ್ದೇಗೌಡ. ನೀವು ಈ ದಾವೆಯಲ್ಲಿ ಪಕ್ಷಗಾರರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಓದಲು ಬರೆಯಲು ಬರುತ್ತದೆ. ನಿಮಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆಯೇ ಎಂದರೆ ಸಾಕ್ಷಿ ಮಾತನಾಡಿದ್ದನ್ನು ಅರ್ಥ ಮಾಡಲು ಆಗುವುದಿಲ್ಲ, ಆದರೆ ಓದುತ್ತೇನೆ ಎಂದು ಹೇಳುತ್ತಾರೆ. ದಾವೆಯಲ್ಲಿ ನಿಮ್ಮ ತಂದೆಯನ್ನು ಹೊರತು ಪಡಿಸಿ ನೀವುಗಳು ಯಾರು ಪಕ್ಷಗಾರರು ಅಲ್ಲ ಎಂದರೆ ಸರಿ.

ನನ್ನ ಮುತ್ತಾತನ ಹೆಸರು ಬೋರೇಗೌಡ. ಬೊರೇಗೌಡರ ತಂದೆಯ ಹೆಸರು ಗೊತ್ತಿಲ್ಲ. ಜವರೇಗೌಡ ಹಾಗೂ ಶಂಭಮ್ಮ ನಿಮ್ಮ ಮುತ್ತಾತ ಹಾಗೂ ಮುತ್ತಜ್ಜಿ ಎಂದರೆ

ಸರಿಯಲ್ಲ. ಸದರಿಯವರಿಗೆ ಬೊರೇಗೌಡ ಹಾಗೂ ಕಾಳೇಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬೊರೇಗೌಡನಿಗೆ ದೇವಮ್ಮ ಹೆಂಡತಿ ಎಂದರೆ ಸರಿ. ಸದರಿ ಬೊರೇಗೌಡ ಹಾಗೂ ದೇವಮ್ಮನಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಸದರಿ ಗಂಡು ಮಕ್ಕಳ ಹೆಸರು ಸಿದ್ದೇಗೌಡ ಮತ್ತು ಸುಬ್ಬೇಗೌಡ ಎಂದರೆ ಸರಿ.

ಕಾಳೇಗೌಡರ ಹೆಂಡತಿ ಹೆಸರು ನಂಜಮ್ಮ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿಯವರಿಗೆ 2 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿಯವರುಗಳೆಂದರೆ ಜವರೇಗೌಡ, ಕಾಡಸಿದ್ದೇಗೌಡ ಮತ್ತು ಜವರಮ್ಮ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ಜವರೇಗೌಡರಿಗೆ 4 ಜನ ಮಕ್ಕಳು, ಅವರುಗಳೆಂದರೆ ಬೊರೇಗೌಡ, ಜವರೇಗೌಡ, ಅಜ್ಜೇಗೌಡ ಮತ್ತು ಸುಬ್ಬೇಗೌಡ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ. ಕಾಡಸಿದ್ದೇಗೌಡನಿಗೆ 3 ಜನ ಮಕ್ಕಳು ಎಂದರೆ ಸರಿ. ಸದರಿಯವರುಗಳೆಂದರೆ ತಮ್ಮೇಗೌಡ, ಸಿದ್ದೇಗೌಡ ಮತ್ತು ಕಾಳಮ್ಮ ಎಂದರೆ ಸರಿ.

ದಾವೆ ಹೂಡಲು ನಿಮ್ಮ ವಕೀಲರಿಗೆ ಮಾಹಿತಿಯನ್ನು ಕೊಟ್ಟದ್ದು ಯಾರು ಎಂದರೆ ಸಾಕ್ಷಿ ನಾನೇ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಬರೆದಿರುವ ವಿಚಾರ ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ಸರಿಯಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳು ಯಾರ ಮಕ್ಕಳು ಎಂದರೆ ಸಾಕ್ಷಿ 1 ರಿಂದ 3 ಜವರೇಗೌಡನ ಮಕ್ಕಳಾಗಿದ್ದು, 4 ನೇ ಪ್ರತಿವಾದಿ ಬೊರೇಗೌಡನ ಹೆಂಡತಿ, 5 ನೇ ಪ್ರತಿವಾದಿ ಪಾರ್ವತಮ್ಮ ಹಾಗೂ ಬೊರೆಗೌಡನ ಮಗ ಎಂದು ಹೇಳುತ್ತಾರೆ. 6 ಮತ್ತು 7 ನೇ ಪ್ರತಿವಾದಿಗಳು ಕಾಡಸಿದ್ದೇಗೌಡನ ಮಕ್ಕಳು. 8 ಮತ್ತು 9 ನೇ ಪ್ರತಿವಾದಿಗಳು ಬೊರೇಗೌಡ ಮಕ್ಕಳು. 10 ನೇ ಪ್ರತಿವಾದಿ ಕಾಡಸಿದ್ದೇಗೌಡನ ಮಗಳು ಎಂದು ಹೇಳುತ್ತಾರೆ.

ನಿಪಿ-2 ಮತ್ತು 3 ದಾಖಲೆಗಳು 6 ಮತ್ತು 7 ನೇ ಪ್ರತಿವಾದಿಗಳ ಹೆಸರನಲ್ಲಿರುವ ದಾಖಲೆಗಳು ಎಂದರೆ ಸರಿ. ನಿಪಿ-1 ಕ್ರಯ ಪತ್ರದಂತೆ ಯಾರಿಂದ ಖರೀದಿ ಮಾಡಿದ್ದು

O.S .No.129/2014
PW-1

ಎಂದರೆ ಸಾಕ್ಷಿ ಜವರೇಗೌಡರ ಮಕ್ಕಳಿಂದ ಎಂದು ಹೇಳುತ್ತಾರೆ.ಯಾವ ದಿನಾಂಕ, ತಿಂಗಳು, ವರ್ಷದಂದು ಖರೀದಿ ಮಾಡಿದ್ದು ಎಂದರೆ ಸಾಕ್ಷಿ ದಿಃ31.03.1971 ಎಂದು ಹೇಳುತ್ತಾರೆ.

ನಿಪಿ-1 ರಂತೆ ಕ್ರಯ ಪತ್ರದ ಸ್ವತ್ತನ್ನು ಜವರೇಗೌಡ, ಅಜ್ಜೇಗೌಢ, ಸುಬ್ಬೇಗೌಡ ಹಾಗೂ ಜವರೇಗೌಡ ರಿಂದ ಖರೀದಿ ಮಾಡಿದ್ದು ಎಂದರೆ ಸರಿ. ನೀವು ಖರೀದಿ ಮಾಡಿರುವ ಸ್ವತ್ತು ಸ.ನಂ.35/4 ಎಂದರೆ ಸಾಕ್ಷಿ ಅದು ತಪ್ಪಾಗಿದೆ ಸ.ನಂ.35/1 ಆಗಬೇಕಿತ್ತು ಎಂದು ಹೇಳುತ್ತಾರೆ. ನೀವು ಸ.ನಂ.35/4 ರಲ್ಲಿ 20 ಗುಂಟೆ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿದ್ದೀರಾ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.